ಒಲುಮೆಯ ಕವಿ ಕೆ . ಎಸ್ ನರಸಿಂಹಸ್ವಾಮಿಯವರ ಜೀವನ ಪ್ರೀತಿ.

ಡಾ.ಟಿ.ಎಲ್. ಜಗದೀಶ

ಸಹ ಪ್ರಾಧ್ಯಾಪಕರು

ಸರ್ಕಾರಿ ಮಹಿಳಾ ಕಾಲೇಜು. ಹುಣಸೂರು

ಆಧುನಿಕ ಕನ್ನಡಸಾಹಿತ್ಯ ಪರಂಪರೆಯಲ್ಲಿ ಮತ್ತೆ-ಮತ್ತೆ ಕೇಳಿ ಬರುವ ಹೆಸರು ಕೆ.ಎಸ್.ನರಸಿಂಹಸ್ವಾಮಿ ಅವರದು. ಅದಕ್ಕೆ ಕಾರಣ ಅವರು ಕಾವ್ಯದ ಆಕರವನ್ನಾಗಿ ಮಾಡಿಕೊಂಡ ವಿಷಯವಸ್ತು. ಎಲ್ಲೋ ಮನದ ಮೂಲೆಯಲ್ಲಿದ್ದ ಪ್ರೇಮ ಹಾಗೂ ನಾಲ್ಕು ಗೋಡೆಗಳಿಗಷ್ಟೇ ಸೀಮಿತವಾಗಿದ್ದ ದಾಂಪತ್ಯ ಭಾವವನ್ನು ಕವಿತೆಯ ವಸ್ತುವನ್ನಾಗಿಸಿ, ಪ್ರೇಮಕವಿಯೆಂದೇ ಗುರುತಿಸಿ ಕೊಂಡವರು. ಅಷ್ಟಕ್ಕೆ ಮಾತ್ರ ಸೀಮಿತವಾಗದೆ ಬರಿಗೊಡಗಳಿಗೆ ಸಮಾಧಾನ ಹೇಳಬಲ್ಲಂತಹ ತೀಕ್ಷ್ಣವಾದ ಪ್ರತಿಕ್ರಿಯೆಯನ್ನು ತೋರಿಸಿದವರು. ಇಂತಹ ಹೆಮ್ಮೆಯ ಕವಿ ಲೋಕದಿಂದ ಚಿರನಿದ್ರೆಗೆ ಜಾರಿದ್ದರೂ ಅವರ ಕಾವ್ಯ ಕುಸುಮ ಸದಾ ಗಮ ಗಮಿಸುತ್ತಲೇ ಇದೆ. ಮಾತ್ರವಲ್ಲ ಕವಿಯ ಸೊಗಸಾದ ರಚನೆಗೆ ಹಿಡಿದ ಕನ್ನಡಿಯಂತಿದೆ. ಇಂತಹ ಅದ್ವಿತೀಯ ಪ್ರೇಮ ಮಾಂತ್ರಿಕನ ಸಾಧನೆಗೆ ಸಂದಿರುವುದೇ 'ಚಂದನ' ವೆಂಬ ಅಭಿನಂದನ ಗ್ರಂಥ.

ಕೆ.ಎಸ್.ನರಸಿಂಹಸ್ವಾಮಿ ಅವರು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಕಿಕ್ಕೇರಿ ಎಂಬಲ್ಲಿ 26-1-1915ರಲ್ಲಿ ಸುಬ್ಬರಾಯರು ಮತ್ತು ನಾಗಮ್ಮನವರ ಗರ್ಭದಲ್ಲಿ ಜನಿಸಿದರು. ಮೈಸೂರಿನಲ್ಲಿ ಪದವಿ ಶಿಕ್ಷಣವನ್ನು ಪಡೆದ ಇವರಿಗೆ ವೆಂಕಮ್ಮನವರು ಬಾಳಸಂಗಾತಿಯಾದರು. ಬಹುಶಃ ಇವರ ನೆನಪಿನಲ್ಲಿಯೇ ಸುಮಾರು ಹದಿನಾರು ಕವನ ಸಂಕಲನಗಳು ಪ್ರಕಟಗೊಂಡಿರಬಹುದು. 'ಮೈಸೂರು ಮಲ್ಲಿಗೆ'ಯ ಕವಿಯೆಂದೇ ಚಿರಪರಿಚಿತರಾದ ಇವರು ಐರಾವತ, ದೀಪದಮಲ್ಲಿ, ಇರುವಂತಿಗೆ, ಶಿಲಾಲತೆ, ತೆರೆದಬಾಗಿಲು ಮೊದಲಾದವುಗಳು. ಇವುಗಳಲ್ಲದೆ ಅನುವಾದ, ವಿಮರ್ಶೆ, ಸಣ್ಣಕತೆ ಹೀಗೆ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ ಶ್ರೇಷ್ಠ ಕನಸುಗಾರನಿಗೆ ಒಂದು ಶತಮಾನವೇ ಕಳೆದಿದೆ. ಈ ಹೊತ್ತಿನಲ್ಲಿ ಅವರ ನೆನಪು ಸದಾ ಕಾಡುತ್ತಿದೆ. ಮಾತ್ರವಲ್ಲ ನಿಚ್ಚ ಅನುರಣಿಸುತ್ತಿದ್ದ

ಪ್ರೇಮಕೋಗಿಲೆಯ ಉಲಿ ಸ್ತಬ್ಧವಾಗಿದ್ದರೂ ಅವರ ಸಾಹಿತ್ಯದ ಅನುಸಂಧಾನ ಪ್ರಸ್ತುತದಲ್ಲಿಯೂ ಅಗತ್ಯವೆನಿಸುತ್ತದೆ. ಅದರಲ್ಲೂ ಗಂಡ-ಹೆಂಡತಿಯರ ಸಂಬಂಧಗಳು ಹಳಸುತ್ತಿರುವ ಈ ಸಂದರ್ಭದಲ್ಲಿ ಕೆ.ಎಸ್.ನ ಅವರ ಕವಿತೆಗಳು ಮನಶಾಸ್ತ್ರಜ್ಞರ ಜವಾಬ್ದಾರಿಯನ್ನು ನಿರ್ವಹಿಸಬೇಕಾದ ಜರೂರಿದೆ.

ಆ ನಿಟ್ಟಿನಲ್ಲಿ ಕೆ.ಎಸ್.ನ ಅವರ ಕಾವ್ಯದ ವೈಖರಿಯನ್ನು ಕುರಿತ ತಿ.ನಂ.ಶ್ರೀಯವರ ಮಾತು ಗಮನ ಸೆಳೆಯುತ್ತದೆ. "ಪಾಶ್ಚಾತ್ಯ ನಾಗರೀಕರ ಜೀವನಕ್ರಮ, ಆಂಗ್ಲವಿದ್ಯೆ ಹಾಗೂ ಸಾಹಿತ್ಯದ ಪ್ರಭಾವದ ಪರಿಣಾಮದಿಂದಾಗಿ ತರುಣ-ತರುಣಿಯರ ಮನಸ್ಸು ಉಲ್ಲಸಿತವಾಗಿದೆ. ಮಾತ್ರವಲ್ಲ ಅವರ ನಡೆ-ನುಡಿ ವೇಷಭೂಷಣ, ಭಾಷೆಗಳೆಲ್ಲವೂ ಬದಲಾಗುತ್ತಿರುವ ಸಂದರ್ಭದಲ್ಲಿ ಕೆ.ಎಸ್.ನ ಅವರ ಕವಿತೆಗಳು ಹಿಂದಿನ ದಿನಗಳ ಜೀವನಕ್ರಮದ ಸೊಗಸನ್ನು ಬಿತ್ತರಿಸುತ್ತವೆ.

"ಸಂಸಾರ ಒಂದು ಸಾಗರ ನಾನು ಒಂದು ದಡ : ಮೀನಾಕ್ಷಿ,

ಇನ್ನೊಂದು ದಡ, ನಡುವೆ ತುಂಗಭದ್ರೆಯ ಹಡಗು

ಚಂದಿರನ ಹೊತ್ತು ಓಡಾಡುವುದು"

ಈ ಕವನದ ಸಾಲುಗಳನ್ನು ತಿ.ನಂ.ಶ್ರೀ ಅವರು ಓದಿದ ಅನಂತರ ಪು.ತಿ.ನರಸಿಂಹಚಾರ್ ಅವರಿಗೆ ಈ ಸಾಲುಗಳ ಮಹತ್ವದ ಬಗೆಗೆ ಪ್ರಸ್ತಾಪಿಸಿರುವುದು ಉಲ್ಲೇಖನೀಯ.

ಕೆ.ಎಸ್.ನರಸಿಂಹಸ್ವಾಮಿಯವರು ರೊಮ್ಯಾಂಟಿಕ್ ಕಾವ್ಯವನ್ನು ತಮ್ಮದೆ ಆದ ಸರಳ ನಿರೂಪಣೆಯೊಂದಿಗೆ ಕಟ್ಟಿಕೊಡುವುದು ಮನನೀಯವಾದುದಾಗಿದೆ. ಅಲ್ಲದೆ ಓದುಗರನ್ನು ಹಿಡಿದಿರುವ ಸಮರ್ಥ ಸಾಧನವಾಗಿ ಈ ಕವಿತೆಗಳು ನೆರವಾಗುತ್ತವೆ. ಈ ಹಿನ್ನೆಲೆಯಲ್ಲಿ ಮತ್ತೆ ಮತ್ತೆ ನೆನಪಾಗುವ ಕವಿತೆ 'ನೀವಲ್ಲವೆ' ಎಂಬುದು. ಈ ಪದ್ಯದ ಸಾಲುಗಳನ್ನು ಓದಿದ ಪ್ರತಿವ್ಯಕ್ತಿಯೂ ಸಂಸಾರಿಯಾಗಬೇಕೆಂಬ ಹಂಬಲವನ್ನು ಹೆಚ್ಚಿಸುವಂತಿದೆ. ಮಾತ್ರವಲ್ಲ ಅದರ ಸುಖವನ್ನು ಅನುಭವಿಸುವ ಉತ್ಕಟತೆಯನ್ನು ಪ್ರತಿಬಿಂಬಿಸುತ್ತದೆ.

'ಹತ್ತು ವರುಷದ ಹಿಂದೆ ಸುತ್ತೂರು ತೇರಿನಲಿ

ಅತ್ತಿತ್ತ ಸುಳಿದವರು ನೀವಲ್ಲವೇ?'

ಈ ಮಲೆನಾಡ ಪರಿಸರದ ಹುಡುಗಿಯನ್ನು ಕಂಡಾಗ ಹುಡುಗನು ಅವಳನ್ನೆ ದಿಟ್ಟಿಸಿ ನೋಡುವುದು. ಅವಳ ನೋಟವು ಇವನ ನೋಟದೊಂದಿಗೆ ಬೆರೆತು. ಅಪೂರ್ವಸಂಗಮದ ಸಿರಿಯಲ್ಲಿ ಜಾತ್ರೆಯಲ್ಲೆಲ್ಲಾ ಅಲೆದು ದಣಿಯುವುದು, ಮಾತ್ರವಲ್ಲ ಈ ಘಟನೆ ನಡೆದು ಸುಮಾರು ಹತ್ತು ವರುಷಗಳು ಉರುಳಿದರೂ ಮಧುರ ಕ್ಷಣಗಳು ಮತ್ತೆ ಮತ್ತೆ ಮರುಕಳಿಸುವ ಬಗೆಯನ್ನು ಕವಿ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಗಂಡ-ಹೆಂಡತಿಯ ನಡುವಿನ ದಾಂಪತ್ಯದ ಸಮರಸತೆಯನ್ನು ಕುರಿತು ಕವಿ ಹೇಳುವ ಸಾಲುಗಳು ದಂಪತಿಗಳನ್ನು ಬೆಸೆಯುವ ಕೊಂಡಿಗಳಂತಿವೆ.

ಬಡತನವೊ ಸಿರಿತನವೊ ಯಾರಿರಲಿ ಎಲ್ಲಿರಲಿ

ದೊರೆಯಾಗಿ ಮೆರೆದವರು ನೀವಲ್ಲವೆ?

ಗಂಡನಿಗೆ ಒಪ್ಪಾಗಿ ಕಂದನಿಗೆ ದಿಕ್ಕಾಗಿ

ಪಯಣದಲಿ ಜೊತೆಯಾಗಿ ನಾನಿಲ್ಲವೆ?

ಈ ಸಾಲುಗಳು ದಾಂಪತ್ಯದ ಬದುಕಿನಲ್ಲಿ ಮೇಲು-ಕೀಳೆನ್ನದೆ ಸಮಭಾವದಿಂದ, ಬೆರೆತು ಅರಿತು ಬಾಳಿದರೆ ಸ್ವರ್ಗಸುಖ ಲಭಿಸುತ್ತದೆ ಎಂಬ ಗುಟ್ಟನ್ನು ಧ್ವನಿಸುತ್ತದೆ. ಮಾತ್ರವಲ್ಲ ಕಷ್ಟ-ಸುಖ ಈ ಎರಡೂ ಸಂದರ್ಭಗಳಲ್ಲಿ ಪರಸ್ಪರ ಬೆರತು ಬಾಳಿದರೆ ಜೀವನ ಸುಂದರವಾಗಿರುತ್ತದೆ ಎನ್ನುವುದರ ಆಶಯ ಈ ಕವಿತೆಯಲ್ಲಿದೆ.

"ಹತ್ತಿರದ ಹೆಣ್ಣೆಂದು ಮತ್ತೆ ಮುತ್ತೂರಿನಲಿ

ಒಪ್ಪಿ ಕೈ ಹಿಡಿದವರು ನೀವಲ್ಲವೆ?"

ಸುತ್ತೂರಿನ ಜಾತ್ರೆಯಲ್ಲಿ ತಾನು ನೋಡಿದ ಹೆಣ್ಣನ್ನೆ ಮದುವೆಯಾಗುವ ಬಯಕೆ ಇಮ್ಮಡಿಸಿದಾಗ ಹಿರಿಯರ ಒಪ್ಪಿಗೆಯನ್ನು ಪಡೆದು ಕೈಹಿಡಿದ ಹುಡುಗನು ಪ್ರೇಮದ ಪ್ರತಿನಿಧಿಯಂತೆ ಶೋಭಿಸುತ್ತಾನೆ. ಹತ್ತಿರದ ಸಂಬಂಧವೆನಿಸಿದರೂ ಮಾವನ ಮಗಳನ್ನು ವರಿಸಲು ಹತ್ತಾರು ವರ್ಷಗಳೇ ಸಂದಿರುವುದು, ಆ ಹುಡುಗನ ನಿರ್ಮಲ ಪ್ರೇಮದ ಪ್ರತೀಕವನಿಸಿದೆ.

ಕವಿ ಕೆ.ಎಸ್.ನ ಅವರು ಪ್ರಾಕೃತಿಕ ಸೊಬಗನ್ನು ತಮ್ಮ ಬದುಕಿನೊಂದಿಗೆ ಕಟ್ಟಿಕೊಡುವ ಸೊಗಸುಗಾರಿಕೆ ಹಾಗೂ ಜೀವನದಲ್ಲಿ ಒದಗಿಬಂದ ಕಷ್ಟ-ಸುಖಗಳನ್ನು ಒಲುಮೆಯಿಂದಲೇ ಗೆಲ್ಲುವ ತಂತ್ರಗಾರಿಕೆಯು ಅವರಿಗೆ ಒಲಿದಿದೆ. ಮದುವೆಯ ನಂತರ ಮಧುಚಂದ್ರಕ್ಕೆಂದು ಎಲ್ಲೆಲ್ಲೋ ಅಲೆಯುವ ಒಲವಿರುತ್ತದೆ. ಆದರೆ ಇವರಿಗೆ ಮಲೆನಾಡ ಪರಿಸರ ನವದಂಪತಿಗಳನ್ನು ಹಿಡಿದಿಡುವಷ್ಟು ಸುಂದರವಾಗಿ ಕಾಣಿಸುತ್ತದೆ.

"ಬೆಟ್ಟಗಳ ಬೆನ್ನಿನಲಿ ಬೆಟ್ಟಗಲ ದಾರಿಯಲಿ ಕಟ್ಟಿಕೊಂಡಲೆದವರು ನೀವಲ್ಲವೆ? ಸಿಟ್ಟಿನಲಿ ಮುಂದಾಗಿ ಕಣಿವೆಯಲಿ ಹಿಂದಾಗಿ

ನಗುನಗುತ ನಡೆದವರು ನೀವಲ್ಲವೆ?"

ಪ್ರಕೃತಿಯ ಪರಿಸರದಲ್ಲಿ ಅಲೆದಲೆದು ಸಂಭ್ರಮಿಸುವ ತುಡಿತವಿರುವ ದಂಪತಿಗಳಿಗೆ ಇಕ್ಕಟ್ಟಾದ ಕಿರುದಾರಿಗಳಲ್ಲಿಯೂ ಪರಸ್ಪರ ದೂರವಾಗದೆ, ಆ ಪ್ರಕೃತಿಯ

ರಮಣೀಯತೆಯನ್ನು ಅನುಭವಿಸಿದ ಅನಂತತೆ ಇಲ್ಲಿ ಅಡಕವಾಗಿದೆ. ಮಾತ್ರವಲ್ಲ ಜೀವನದ ಸವಿಯನ್ನು ಸವಿಯುವ ಸುಖಮಯ ಜಗತ್ತೆಂದು ಭಾವಿಸುವ ಸನ್ನಿವೇಶವನ್ನು ಕವಿ ಮನೋಹರವಾಗಿ ಕಟ್ಟಿಕೊಡುತ್ತಾರೆ.

ಉತ್ಸಾಹದ ಭರದಲ್ಲಿ ಗಂಡ ಸಿಟ್ಟಾಗಿ ನಡೆದುಕೊಂಡರೂ ಹೆಂಡತಿಯನ್ನು ಕಣಿವೆಯ ಮಾರ್ಗದಲ್ಲಿ ಜೋಪಾನವಾಗಿ ಕಾಪಾಡುವ ಸಂಸ್ಕೃತಿ ಅವನದಾಗಿದೆ. ಈ ರಸಿಕ ದಂಪತಿಗಳು ಮಲೆನಾಡ ಸೌಂದರ್ಯವನ್ನು ಮೊಗೆಮೊಗೆದು ಉಂಡಿದ್ದಿದೆ. ದಂಪತಿಗಳ ಉತ್ಸಾಹ, ಅನುಭವ ಕುಗ್ಗದೆ ಕವಿತೆಯ ಉದ್ದಕ್ಕೂ ಹರಹಿಕೊಂಡಿದೆ. ಇದು ಕವಿಯ ಜಾಣ್ಮೆ ಹಾಗೂ ಅವನ ರಸಿಕತನವನ್ನು ತೋರಿಸುತ್ತದೆ.

ಕೆ.ಎಸ್.ನರಸಿಂಹಸ್ವಾಮಿಯವರ ಕವಿತೆಗಳಲ್ಲಿ ಪ್ರಧಾನವಾಗಿ ಮೈಸೂರುಮಲ್ಲಿಗೆ ಹಾಗೂ ಶಿಲಾಲತೆಯಂತಹ ಸಂಕಲನಗಳಲ್ಲಿ ದಾಂಪತ್ಯದ ಚಿತ್ರಣ ಮೈದುಂಬುತ್ತದೆ. ಮಾತ್ರವಲ್ಲ ಕೆಲವು ಪದ್ಯಗಳು ನವದಾಂಪತ್ಯದ ಶೃಂಗಾರಮಿಶ್ರಿತ ಸರಸ ಸಲ್ಲಾಪಗಳೆರಡನ್ನು ಪ್ರತಿಬಿಂಬಿಸುತ್ತವೆಯಾದರೂ ಸುಖ ದುಃಖಗಳೆರಡನ್ನು ಸಮನಾಗಿ ಸ್ವೀಕರಿಸುವ ಔದಾರ್ಯವನ್ನು ಕವಿ ತಮ್ಮ ಕವಿತೆಗಳಲ್ಲಿ ಮೂಡಿಸಿದ್ದಾರೆ. ಅಲ್ಲದೆ ದುಃಖವನ್ನು ದೂರಾಗಿಸುವಂತಹ ಒಲವೇ ಇವರ ...

ಕವಿಗಿದೆ. ಹಾಗಾಗಿ ಕೇವಲ ದಾಂಪತ್ಯ ಮತ್ತು ಪ್ರೇಮಕವಿತೆಗಳಿಗಷ್ಟೇ ಸೀಮಿತವಾಗದೆ ಸಾಮಾಜಿಕ ಸಮಸ್ಯೆಗಳನ್ನು ಅಭಿವ್ಯಕ್ತಪಡಿಸುವಲ್ಲಿ ಅವರು ಸಮರ್ಥರು ಎನ್ನುವುದಕ್ಕೆ 'ಸಂಬಳದ ಸಂಜೆ'ಯಂತಹ ಹಲವಾರು ಕವಿತೆಗಳು ಸಾಕ್ಷಿಯೆನಿಸುತ್ತವೆ. ಇಂತಹ ಕವಿಯ ಪ್ರಸ್ತುತತೆ ಓದುಗರನ್ನು ಸದಾ ಕಾಡುತ್ತದೆ. ಆದರೂ ಅವರ ಕಾವ್ಯ ಅಂತಹ ಮನಗಳಿಗೆ ತಂಪನ್ನೆರೆಯುವ ಕಾಯಕವನ್ನ ಮಾಡುತ್ತಿವೆಯೆಂದರೆ ತಪ್ಪಾಗಲಾರದು. ಆದುದರಿಂದಲೇ ಕವಿ ಕೆ.ಎಸ್.ನರಸಿಂಹಸ್ವಾಮಿಯವರು ಸರ್ವರನ್ನು ಸೆಳೆದುಕೊಳ್ಳುವ 'ಪ್ರೇಮದ ಕವಿ'ಯೆನಿಸಿರುವುದು ಸುಳ್ಳೇನಲ್ಲ.

ಆಕರ ಕೃತಿಗಳು

01. ಚಂದನ. ಅಭಿನಂನಾ ಗ್ರಂಥ.
02. ಕರ್ನಾಟಕ ಕವಿ ಚರಿತೆ. ಆರ್ ನರಸಿಂಹಾಚಾರ್.